## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 258/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಾಣಿಕ್.ಎಸ್.ಜೆ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಗಣಪತಿ | | **04.03.2025** |
| **ವಯಸ್ಸು** | ಃ 48 ವರ್ಷ | | |
| **ವೃತ್ತಿ** | ಃ ಪಿ.ಸಿ, ಮೇಟಗಳ್ಳಿ ಪೋಲೀಸ್ ಠಾಣೆ | **ಪ್ರಾ.ಸಾ.** ಃ 19 | |
| **ವಾಸಸ್ಥಳ** | ಃ ಹೆಬ್ಬಾಳ್, ಮೈಸೂರು | **ಚಾ.ಸಾ.** ಃ 24 | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2021* ರಿಂದ ಇಲ್ಲಿಯವರೆಗೆ ನಾನು ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡುತ್ತಿದ್ದೇನ. ದಿಃ*25.05.2023* ರಂದು ಮೊ.ಸಂಖ್ಯೆ *56/2023* ಪ್ರಕರಣದಲ್ಲಿ ಆರೋಪಿ ಮೊಹನ್ ಕುಮಾರ್ ಇವರನ್ನು ಪತ್ತೆ ಮಾಡಲು ನನ್ನನ್ನು ಮತ್ತು ಪಿ.ಸಿ-*1134* ಇವರನ್ನು ನೇಮಿಸಿದ್ದರು ಅದಂರತೆ ನಾನು ಸಿದ್ದಲಿಂಗಪುರ, ಆಲನಹಳ್ಳಿ, ನಾಗನಹಳ್ಳಿ ಮುಂತಾದ ಕಡೆ ಭೇಟಿ ನೀಡಿ ಬಾತ್ಮಿದಾರರ ಮಾಹಿತಿ ಮೇರೆಗೆ ಆರೋಪಿಯು ಕೆ.ಆರ್. ಆಸ್ಪತ್ರೆ ಕಡೆ ಇರುವುದಾಗಿ ಖಚಿತ ಮಾಹಿತಿಯೊಂದಿಗೆ ಮದ್ಯಾಹ್ನ *2* ಗಂಟೆ ಸಮಯದಲ್ಲಿ ಕೆ.ಆರ್. ಆಸ್ಪತ್ರೆ ಕಡೆ ನಡೆದುಕೊಂಡು ಹೋಗುತ್ತಿದ್ದ ಆರೋಪಿ ಮೊಹನ್ ಕುಮಾರ್ ಇವರನ್ನು ವಿಚಾರಿಸಿ ಅವರೇ ಆರೋಪಿ ಮೊಹನ್ ಕುಮಾರ್ ಎಂದು ಖಚಿತಪಡಿಸಿಕೊಂಡು ಮದ್ಯಾಹ್ನ *3* ಗಂಟೆಗೆ ಠಾಣಾಧಿಕಾರಿ ಮುಂದೆ ಹಾಜರುಪಡಿಸಿದ್ದೇನೆ. ಕೋರ್ಟ್ ಮುಂದೆ ಇರುವ ಆರೋಪಿತನೇ ಆ ದಿನ ನಾವು

ವಶಕ್ಕೆ ಪಡೆದಿದ್ದ ಮೋಹನ್ ಕುಮಾರ್ ಇರುತ್ತಾನೆ. ಈ ಕುರಿತು ವರದಿ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ-27 ಮತ್ತು ಸಹಿಯನ್ನು ನಿಪಿ-27(ಎ) ಎಂದು ಗುರುತಿಸಿದೆ.

ಪಾಟೀ ಸವಾಲು : ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿತ ಸಮಯ ಕೋರಿದ್ದರಿಂದ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು